ರಾಯರ ಕುದುರೆ ಬರು ಬರುತ್ತಾ ಕತ್ತೆ ಆಯಿತು ಅಂದ ಹಾಗೆ ಆಗಿದೆ. ಇಂಗ್ಲೀಷ್‌ನಲ್ಲಿ ಏತಕ್ಕೆ ಓದ ಬೇಕು ? ಕನ್ನಡದ ಪ್ರತಿಯನ್ನು ಏತಕ್ಕೆ ಒದಗಿಸಬಾರದು ? ಸರ್ಕಾರಕ್ಕೆ ಏತಕ್ಕೆ ಈ ಪರಿಸ್ಥಿತಿ ಬಂತು ? ಕನ್ನಡದ ಉದ್ಧಾರವೆಂದು ಹೇಳುತ್ತಾರೆ, ಕನ್ನಡ ಆಡಳಿತ ಭಾಷೆ ಎಂದು ಹೇಳುತ್ತಾರೆ. ಆದರೆ ಇಲ್ಲಿ ಇಂಗ್ಲೀಷ್‌ನಲ್ಲಿ ಓದುತ್ತಾರೆ,

ನಮಗಂತೂ ಇದು ಬೇಕಾಗಿಲ್ಲ. ಇದನ್ನು ಧಿಕ್ಕರಿಸಿ ಈ ಹೇಳಿಕೆಯನ್ನು ನಾನು ಹರಿದು ಹಾಕುತ್ತಿದ್ದೇನೆ. ಇನ್ನು ಮೇಲೆ ಈ ತರಹ ಇಂಗ್ಲೀಷ್‌ನಲ್ಲಿ ಹೇಳಿಕೆ ಕೊಡಬಾರದು. ಇದನ್ನು ಗಂಭೀರವಾಗಿ ತೆಗೆದುಕೊಂಡು ಇನ್ನು ಮುಂದೆ ಕನ್ನಡದಲ್ಲೇ ಕಾಪಿಗಳನ್ನು ನಮಗೆ ಕೊಡಬೇಕು.

(ಹೇಳಿಕೆಯ ಪ್ರತಿಗಳನ್ನು ಈ ಸಂದರ್ಭದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಹರಿದು ಹಾಕಿದರು.)

ಛೇರ್ಮನ್ರ್.—ಇನ್ನು ಮುಂದೆ ಹೇಳಿಕೆಗಳನ್ನು ಕನ್ನಡದಲ್ಲೇ ಕೊಡಿಸುತ್ತೇವೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಇದು ಕನ್ನಡ ರಾಜ್ಯ ಎಂದು ಹೇಳುತ್ತಾರೆ ಆದರೆ ಎಲ್ಲಾ ವ್ಯವಹಾರವನ್ನು ಇಂಗ್ಲೀಷ್‌ನಲ್ಲಿ ಮಾಡುತ್ತಾರೆ.

ಶ್ರೀ ಎಂ. ಪಿ. ವೆಂಕಟೇಶ್.—ಸರ್ಕಾರದಿಂದ ಬರುವ ಉತ್ತರಗಳಿಗೂ ಅಧಿಕಾರಿಗಳೇ ಸಹಿ ಹಾಕುತ್ತಿದ್ದಾರೆ. ಮತ್ತೆ ಆ ಉತ್ತರಗಳು ಇಂಗ್ಲೀಷ್‌ನಲ್ಲೇ ಇರುತ್ತವೆ. ಮಂತ್ರಿಗಳು ಅದೇ ಉತ್ತರವನ್ನು ಓದುತ್ತಾರೆ.

ಶ್ರೀ ಎಂ. ವಂಲ್ಲಿಕಾರ್ಜುನ ಖರ್ಗೆ.—ಇನ್ನು ಮುಂದೆ ಎಲ್ಲಾ ಉತ್ತರಗಳನ್ನು ಕನ್ನಡದಲ್ಲಿ ಕೊಡುತ್ತೇವೆ. ಈಗ ಕೊಟ್ಟಿರುವ ಉತ್ತರವನ್ನೂ ಕನ್ನಡಕ್ಕೆ ತರ್ಜುಮೆ ಮಾಡಿ ಕೊಡಿ ಎಂದರೂ ಹಾಗೇ ಮಾಡುತ್ತೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಇದು ಒಬ್ಬ ಸಚಿವರ ಪ್ರಶ್ನೆಯಲ್ಲ. ಇದು ಇಡೀ ಸರ್ಕಾರದ ಪ್ರಶ್ನೆ. ಸರ್ಕಾರಕ್ಕೆ ಒಂದು ನಿರ್ಧಾರ ಬೇಕು, ಒಂದು ನೀತಿ ಬೇಕು. ಇಲ್ಲ ನಾವು ಕನ್ನಡ ಭಾಷೆಯಲ್ಲಿ ಆಡಳಿತ ಮಾಡುವುದಿಲ್ಲವೆಂದು ಹೇಳಲಿ. ಕನ್ನಡ ಆಡಳಿತ ಭಾಷೆ ಮಾಡುತ್ತೇವೆಂದು ಹೇಳಿರುವುದು ಒಣ ಮಾತು, ಬುರುಡೆ ಮಾತು ಎಂದು ಹೇಳಲಿ. ನಾನು ಯಾರೋ ಒಬ್ಬರು ಮಂತ್ರಿಗಳನ್ನು ಅಕ್ಷೇಪಣೆ ಮಾಡುತ್ತಿಲ್ಲ. ಸರ್ಕಾರದ ಒಟ್ಟು ಜವಾಬ್ದಾರಿ ಇದಾಗಬೇಕು. ನಾವು ಏನಾದರೂ ಕೇಳುವುದಕ್ಕೆ ಹೋದರೆ ಕೆಲವರಿಗೆ ಒಂದು ನೀತಿ ನೋವಾಗುತ್ತದೆ.

ಛೇರ್ಮನ್.—ಅನಿವಾರ್ಯ ಸಂದರ್ಭಗಳನ್ನು ಬಿಟ್ಟು ಇನ್ನೆಲ್ಲಾ ಸಂದರ್ಭಗಳಲ್ಲೂ ಕನ್ನಡಲ್ಲೇ ಉತ್ತರ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್.—ಕಳೆದ ಅಧಿವೇಶನದಲ್ಲೂ ಇದೇ ರೀತಿಯಾಗಿತ್ತು.

ಶ್ರೀ ವಾಟಾಳ್ ನಾಗರಾಜ್.—ನಿನ್ನೆ ದಿವಸ ಕೊಟ್ಟಿದ್ದ ಪಟ್ಟಿಸೊದೆಯೂ ಇಂಗ್ಲೀಷ್‌ನಲ್ಲೇ ಇತ್ತು. ಎಲ್ಲಾ ಬರೀ ಇಂಗ್ಲೀಷ್‌ನಲ್ಲಿ ಕೊಡುತ್ತಿದ್ದಾರೆ.

ಛೇರ್ಮನ್.—ಇನ್ನು ಮೇಲೆ ಎಲ್ಲವನ್ನು ಕನ್ನಡದಲ್ಲೇ ಕೊಡಿಸುತ್ತೇವೆ. ತಾವುಗಳು ಕುಳಿತುಕೊಳ್ಳಿ

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್.—ನೋಡಿ ಈ ಮಸೂದೆಯನ್ನು ಮೇಲೆ ಕರ್ನಾಟಕ ರಾಜ್ಯ ಎಂದು ಕನ್ನಡದಲ್ಲಿ ಇದೆ. ಕೆಳಗೆ ಎಲ್ಲಾ ಇಂಗ್ಲೀಷ್ ಇದೆ.

ಛೇರ್ಮನ್.—ನೋಡಿ, ಅನಿವಾರ್ಯ ಸಂದರ್ಭದಲ್ಲಿ.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ಆಂತರ ಅನಿವಾರ್ಯ ಸಂದರ್ಭ ಏನು ಬಂದಿದೆ ? ಏಕೆ ಸರ್ಕಾರದಲ್ಲಿ ಕನ್ನಡ ಬರಹಗಾರರಿಲ್ಲವೆ ? ಕನ್ನಡ ಶೀಘ್ರಲಿಗಾರರಿಲ್ಲವೆ ? ಕನ್ನಡ ಬರೆಯುವವರು ಇಲ್ಲವೆ ? ಇನ್ನು ಮುಂದೆ ಎಲ್ಲಾ ವಿಷಯವೂ ಕನ್ನಡದಲ್ಲೇ ಬರಬೇಕು.